# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಎಮ್ ವಿ ಸಿ ನಂ: 276/2023**
**ಪಿ.ಡಬ್ಲ್ಯೂ: , 1 ಮಾಧುರಿ**

ದಿನಾಂಕ :27-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರೆದ ಮುಖ್ಯ ವಿಚಾರಣೆ - ವಿ ಎಸ್ ಆರ್ ವಕೀಲರಿಂದ

ಸಾಕ್ಷಿಯು ಈ ದಿನ ಹಾಜರು ಪಡಿಸಿದ ಡಿಸ್ಚಾರ್ಜ ಸಮರಿ ದಾಖಲೆಯಗಳನ್ನು ನಿಪಿ-16 ಮತ್ತು 17 ಎಂದು ಗುರುತಿಸಲಾಯಿತು .

ಪಾಟಿ ಸವಾಲು :- ಶ್ರೀ ವಿ ಎನ್ ಎಮ್ ವಕೀಲರಿಂದ

ನಾನು ಬಿ, ಕಾಂ, ಪದವಿದರೆಯಾಗಿರುತ್ತೆನೆ ಅರ್ಜಿದಾರರು 5 ನೇ ತರಗತಿವರೆಗೂ ಒದಿರುತ್ತಾರೆ . ನಾನು ಯಾವುದೆ ಉದ್ಯೋಗ ಮಾಡುತ್ತಿಲ್ಲಾ ಗೃಹಣಿಯಾಗಿರುತ್ತೆನೆ . ನನ್ನ ಯಜಮಾನರು 42 ರಿಂದ 45 ವರ್ಷ ವಯಸ್ಸಿನವರು ಎಂದರೆ ಸಾಕ್ಷಿ ದಾಖಲೆಗಳಲ್ಲಿ ಸರಿಯಾಗಿಲ್ಲಾ 40 ವರ್ಷ ಇರಬಹುದು ಎಂದು ಹೇಳುತ್ತಾರೆ . ಅವರ ವಯಸ್ಸು ತೋರಿಸಲು ಶಾಲಾ ದಾಖಾಲಾತಿಗಳನ್ನು ಹಾಕಿಲ್ಲಾ ಎನ್ನುವುದು ಸರಿ . ನಾನು ರೇಶನ್ ಕಾರ್ಡ ಹಾಜರುಪಡಿಸಬಲ್ಲೆ ಅವರ ವಯಸ್ಸು ಎಷ್ಟ ಎಂದು ಮರೆಮಾಚಲು ದಾಖಲೆಗಳನ್ನು ಹಾಕಿಲ್ಲಾ ಎಂದರೆ ಸರಿಯಲ್ಲಾ . ನನ್ನ ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಅರ್ಜಿದಾರರು ಎನು ವ್ಯಾಪಾರ ಮಾಡುತಿದ್ದರು ಎಂದು ಬರೆದಿಲ್ಲಾ ಎಂದರೆ ಸಾಕ್ಷಿ ಹೌದು ಆದರೆ ಅವರು ಹೊಲಿಗೆ ಯಂತ್ರ ರೀಪೇರಿ ಮತ್ತು ಸರವಿಸ ವ್ಯಾಪಾರ ಮಾಡುತಿದ್ದರು ಎಂದು ಹೇಳುತ್ತಾರೆ . ಅವರು ಈ ರೀತಿ ವ್ಯಾಪಾರ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲಾ . ಈ ಬಗ್ಗೆ ಅವರು ತರಬೇತಿ ಪಡೆದಿರುತ್ತಾರೆ ಆದರೆ ಆ ಬಗ್ಗೆ ದಾಖಲೆ ಹಾಕಿಲ್ಲಾ ಎಂದು ಹೇಳುತ್ತಾರೆ . ಅರ್ಜಿದಾರರು ಆ ರೀತಿ ವ್ಯಾಪಾರ ಮಾಡಿ ತಿಂಗಳಿಗೆ ಇಪ್ಪತ್ತು ಸಾವಿರ ರೂಪಾಯಿ ಗಳಿಸುತ್ತಿದ್ದರು ಎಂದು ಸುಳ್ಳು ಹೇಳಿದ್ದೆನೆ ಎಂದರೆ ಸರಿಯಲ್ಲಾ . ಈ ಬಗ್ಗೆ ಆದಾಯ ತೆರಿಗೆ ಪಾವತಿ ಮಾಡುತ್ತಿದು ಆದರೆ ದಾಖಲೆಗಳನ್ನು ಹಾಕಿಲ್ಲಾ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲಾ .

ಅಪಘಾತವು 06-03-2022 ರಲ್ಲಿ ಆಗಿರುತ್ತದೆ . ಅರ್ಜಿದಾರರು ಮೋಟರ್ ಸೈಕಲ್ ನಲ್ಲಿ ಹೊಗುತ್ತಿದಾಗ ಅಪಘಾತ ಆಗಿರುತ್ತದೆ . ಅವರು ಗಾಡಿ ಒಡಿಸಲು ಡಿ ಎಲ್ ಹೊಂದಿರುತ್ತಾರೆ ಅದನ್ನು ಹಾಜರು ಪಡಿಸಿಲ್ಲಾ . ಅವರಿಗೆ ಡಿ ಎಲ್ ಇರಲಿಲ್ಲಾ ಮತ್ತು ಅಪಘಾತವು ಅವರ ತಪ್ಪಿನಿಂದ ಆಗಿದೆ ಎನ್ನುವುದು ಸರಿಯಲ್ಲಾ . ದೂರನ್ನು ನಾನೆ ಬರೆದು ಕೊಟ್ಟಿರುತ್ತೆನೆ . ದೂರಿನಲ್ಲಿ ಕೆ ಎ 33 5848 ಎಂದು ಬರೆದಿದ್ದು ನಂತರ ಕೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಹೌದು ಮರೆತ್ತು ಹೊಗಿತ್ತು ಆನಂತರ ಬರೆದಿದ್ದನೆ ಎಂದು ಹೇಳುತ್ತಾರೆ . ಅಪಘಾತವು ಕೆ ಎ 32 ಇ ಎಚ್ 7159 ವಾಹನದಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲಾ . ದೂರಿನಲ್ಲಿ ಈ ವಾಹನ ನಂಬರನ್ನು ಸಹ ತಿದ್ದುಪಡಿ ಮಾಡಿ

ಬರೆದಿದ್ದೆನೆ ಎಂದರೆ ಸರಿ .ಸದರಿ ವಾಹನದಿಂದಾ ಈ ಅಪಘಾತ ಆಗಿಲ್ಲಾ ಎಂದು ಸೂಚಿಸುವುದು ಸರಿಯಲ್ಲಾ. ಅದೇ ರೀತಿ FIR ನಲ್ಲೂ ಸಹ ತಿದ್ದುಪಡಿ ಮಾಡಿದ್ದಾರೆ ಎನ್ನುವುದು ಸರಿ . ಅದೇ ರೀತಿ ನಿಪಿ-4 ಅಮಾನತು ಪಂಚನಾಮೆಯಲ್ಲಿ ಸಹ ವಾಹನ ಜಪ್ತಿ ಮಾಡಿದ ದಿನಾಂಕ ತಿದ್ದುಪಡಿಮಾಡಲಾಗಿದೆ ಎಂದರೆ ಸರಿ . ದೂರನ್ನು ನಾನು 36 ದಿನ ತಡವಾಗಿ ಕೊಟ್ಟಿರುತ್ತೆನೆ ಎನ್ನುವುದು ಸರಿ . ನಾನು ದೂರನ್ನು ತಡವಾಗಿ ಕೊಡಲು ಸಮಂಜಸ ಕಾರಣ ಹೇಳಿಲ್ಲಾ ಎಂದರೆ ಸರಿಯಲ್ಲಾ ಎದುರುದಾರರ ವಾಹನವನ್ನು ಸೇರಿಸಲು 36 ದಿನ ತಡವಾಗಿ ಸುಳ್ಳು ದೂರು ಕೊಟ್ಟಿದ್ದೆನೆಂದರೆ ಸರಿಯಲ್ಲಾ . ಅಪಘಾತ ಪಡಿಸಿದ ವಾಹನ ಯಾವುದು ಎಂದು ಗೊತ್ತಿರದ ಕಾರಣ ತಪ್ಪ ವಾಹನ ನಂಬರ್ ಬರೆದು ತಿದ್ದುಪಡಿಮಾಡಿದ್ದೆವೆ ಎಂದರೆ ಸರಿಯಲ್ಲಾ . ಸದರಿ ಅಪಘಾತ ಪಡಿಸಿದ ವಾಹನದ ಚಾಲಕನಿಗೆ ಡಿ ಎಲ್ ಇರಲಿಲ್ಲಾ ಎಂದರೆ ಗೋತ್ತಿಲ್ಲಾ ಎಂದು ಹೇಳುತ್ತಾರೆ . ಅರ್ಜಿದಾರರಿಗೆ ಡಿ ಎಲ್ ಇರಲಿಲ್ಲಾ ಮತ್ತು ಅವರ ವಾಹನಕ್ಕೆ ವಿಮೆ ಇರದ ಕಾರಣ ವಾಹನವನ್ನು ಸೇರಿಸಿ ಸುಳ್ಳು ಪ್ರಕರಣ ದಾಖಾಲಿಸಿದ್ದೆನೆ ಎಂದರೆ ಸರಿಯಲ್ಲಾ ಅದ ಕಾರಣ ಎದುರುದಾರರು ಪರಿಹಾರ ನೀಡಲು ಬಾಧ್ಯಸ್ಥರಲ್ಲಾ ಎನ್ನುವುದು ಸರಿಯಲ್ಲಾ .

ಅಪಘಾತವಾದ ನಂತರ ತಕ್ಷಣವೇ ಎಮ್ ಎಲ್ ಸಿ ಆಗಿಲ್ಲಾ ಎಂದು ಸೂಚಿಸುವುದು ಸರಿಯಲ್ಲಾ . ಅರ್ಜಿದಾರರು ಆರೋಗ್ಯವಾಗಿದ್ದು ಸಾಕ್ಷಿ ನೀಡಿಲು ಸಾಧ್ಯವಿದ್ದರು ಸಹ ಅವರ ಆರೋಗ್ಯ ಸರಿಯಿಲ್ಲಾ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲಾ . ನನ್ನ ಪ್ರಮಾಣ ಪತ್ರದ ಪ್ಯಾರ3 ರಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲಾ . ಚಿಕಿತ್ಸೆಗಾಗಿ ಹತ್ತು ಲಕ್ಷ ರೂಪಾಯಿ ಖರ್ಚು ಅಗಿದ್ದು ಇನ್ನು ನಾಲ್ಕುವರೆ ಲಕ್ಷ ಖರ್ಚು ಇದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲಾ . ಅರ್ಜಿದಾರರಿಗೆ ಈಗ ಕೆಲಸ ಮಾಡಲು ಆಗುತಿಲ್ಲಾ ದುಡಿಮೆ ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲಾ .ಔಷಧಿ ಬಿಲಗಳನ್ನು ಆಸ್ಪತ್ರೆಯವರೊಂದಿಗೆ ಶಾಮಿಲಾಗಿ ಸೃಷ್ಟಿಸಿ ಹಾಕಿದ್ದೆನೆ ಎಂದರೆ ಸರಿಯಲ್ಲಾ . ಪರಿಹಾರ ಹೆಚ್ಚಿಗೆ ಸಿಗಲಿ ಎಂದು ಅಂಗನ್ಯೂನತೆ ಪ್ರಮಾಣ ಪತ್ರ ಗಳನ್ನು ಸೃಷ್ಟಿಸಿ ಹಾಕಿದ್ದೆನೆ ಎಂದರೆ ಸರಿಯಲ್ಲಾ. ನಾನು ಕೇಳಿರುವ ಪರಹಾರದ ಮೊತ್ತ ಆಧಾರ ರಹಿತಾವಾಗಿದೆ ಎಂದರೆ ಸರಿಯಲ್ಲಾ . ನಾನು ಸುಳ್ಳು ಪ್ರಮಾಣ ಪತ್ರ ಸಲಿಸಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲಾ .

ಮರು ವಿಚಾರಣೆ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.